# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/56/16-17

ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ಶ್ರೀ ಎ.ವೆಂಕಟೇಶ ತಂದೆ ಲೇಟ್ ಶ್ರೀ ಹಂಪಯ್ಯ ಬ್ಯಾಲಚಿಂತೆ ಗ್ರಾಮ ಬಳ್ಳಾರಿ<br><br>ಶ್ರೀ ಪಿ.ಮಲ್ಲಯ್ಯ ವಕೀಲರು ಬಳ್ಳಾರಿ | 1) ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಮೋಕಾ<br>3)ಗ್ರಾಮ ಲೆಕ್ಕಾಧಿಕಾರಿಗಳು ಗೊಲ್ಲರನಾಗೇನಹಳ್ಳಿ<br>4)ಶ್ರೀ ನಾರಾಯಣ ಸ್ವಾಮಿ ತಂದೆ ಲೇಟ್ ತಿಮ್ಮಪ್ಪ<br>5)ಶ್ರೀ ಆಂಜನೇಯ್ಯ ತಂದೆ ಲೇಟ್ ತಿಮ್ಮಪ್ಪ ಬ್ಯಾಲಚಿಂತೆ ಗ್ರಾಮ ಮೋಕಾ ಹೋಬಳಿ ಬಳ್ಳಾರಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
| --- | --- | --- | --- |
| ಬಳ್ಳಾರಿ | ಗೊಲ್ಲರನಾಗೇನಹಳ್ಳಿ | 129/ಸಿ | 2.59 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು ಬಳ್ಳಾರಿ ಇವರ ಹಿಂಬರಹ 426/15-16 ದಿನಾಂಕ 16-11-2015 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರವಕೀಲರು ವಿಚಾರಣೆಗೆ ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಗೊಲ್ಲರನಾಗೇನಹಳ್ಳಿ ಗ್ರಾಮದ ಸ.ನಂ 129/ಸಿ ವಿಸ್ತೀರ್ಣ: 2.59 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು ಬಳ್ಳಾರಿ ಇವರ ಹಿಂಬರಹ 426/15-16 ದಿನಾಂಕ 16-11-2015 ಪ್ರಶ್ನಿಸುತ್ತಾ, ಸದರಿ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ದಾಸ್ತವೇಜು 1974/1952 ದಿನಾಂಕ 18-08-1952 ಪ್ರಕಾರ ಅಗಸರ ಹನುಮಂತಪ್ಪನ ಮಕ್ಕಳು ಲಿಂಗಣ್ಣ ಮತ್ತು ಹಂಪಯ್ಯ ಇವರ ಪಾಲುಪತ್ರದಂತೆ ಹಂಪಯ್ಯ ಇವರಿಗೆ ಸದರಿ ಜಮೀನು ಬಂದಿರುತ್ತದೆ.

ಮುಂದುವರೆದು ಮೇಲ್ಮನವಿದಾರರ ಮನವಿ ಮತ್ತು ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ , ಸ.ನಂ 129/ಡಿ ವಿಸ್ತೀರ್ಣ 2.74 ರ ಜಮೀನಿನ ವಾರಸುದಾರರನ್ನು ನಮೂದಿಸುವಾಗ್ಗೆ, ಸ.ನಂ 129/ಡಿ ಬದಲಾಗಿ 129/ಸಿ ರಲ್ಲಿ ನಮೂದಿಸುರುತ್ತಾರೆ. ಕಾರಣ ಸದರಿ ಪ್ರಕರಣವು ತಿದ್ದುಪಡಿ ವ್ಯಾಪ್ತಿಗೆ ಬರುತ್ತಿದ್ದು ಕಾರಣ , ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ.